ಕಥೆ



**ಅನಿಲ್ ಗುನ್ನಾಪೂರ**

ಕಲೆ: ವಿಶ್ವನಾಥ್ ಎ.ಎಸ್

# ಲಿಂಗಾಯತ ಖಾನಾವಳಿ

ರಸ್ತೆ ಬದಿಯ ಪಾಳುಬಿದ್ದ ತಂಗುದಾಣದೊಳಗೆ ಮಾದೇವ ಮಲಗಿ ಬಹಳ ಹೊತ್ತಾಗಿತ್ತು. ನಡೆದೂ ನಡೆದೂ ಸುಸ್ತಾಗಿ ರಾತ್ರಿ ಯಾವಾಗ ಬಂದು ಮಲಗಿದನೆಂಬುದು ಸ್ವತಃ ಅವನಿಗೂ ಗೊತ್ತಿಲ್ಲ. ನಸುಕಿನ ವೇಳೆಗೆ ಎಚ್ಚರಗೊಂಡ. ಸೊಳ್ಳೆಗಳು ಅವನ ರಕ್ತಹೀರಿ ಮೈತುಂಬ ಗದುವ ಎಬ್ಬಿಸಿದ್ದವು. ಕರಕರ ತುರಿಸಿಕೊಳ್ಳುತ್ತ ಎದ್ದು ಕೂತ. ಅಕ್ಕಪಕ್ಕದಲ್ಲೆಲ್ಲ ಕಸ, ಕಡ್ಡಿ, ಧೂಳು ತುಂಬಿ ಗಬ್ಬುನಾಥ ಸೂಸುತ್ತಿತ್ತು. ವಾಕರಿಕೆ ಬಂದು ಎದ್ದು ನಿಂತ. ಅಲ್ಲಿಯೇ ಮಲಗಿದ್ದ ನಾಯಿ ತನ್ನ ಹೊರತು ಮತ್ತ್ಯಾರೋ ಆಗಂತುಕ ಅಡಿಯಿಟ್ಟದನ್ನು ಸಹಿಸಿಕೊಳ್ಳಲಾಗದೆ ಬೊಗಳುತ್ತ ಒಮ್ಮೆಲೇ ಅವನ ಮೈಮೇಲೆ ದಾಳಿಗೆ ಮುಂದಾಯಿತು. ಗಾಬರಿ ಬಿದ್ದು ಹಳ್ಯಾ... ಹಳ್ಯಾ... ಎನ್ನುತ್ತ ಹಿಂದಕ್ಕೆ ಸರಿದು ನಿಂತ. ಒಂದಷ್ಟು ಹೊತ್ತು ಗುರಾಯಿಸಿದ ನಾಯಿ 'ಪಾಪ! ಇವನು ತನ್ನಂತೆ ದಿಕ್ಕಿಲ್ಲದವನು' ಎಂದು ಅರ್ಥಮಾಡಿಕೊಂಡಿತೇನೋ? ಬಾಲ ಅಲ್ಲಾಡಿಸುತ್ತ ಹೊರಗೆ ಓಡಿತು.

ಮಾದೇವ ತನ್ನೂರಿನ ನಂಟು ಕಳಚಿಕೊಂಡು ಆರು ತಿಂಗಳ ಮೇಲಾಗಿತ್ತು. ಈಗಂತೂ ಯಾರಿಗೂ ಖೂನ ಸಿಗದಷ್ಟು ಬದಲಾಗಿ ಬಿಟ್ಟಿದ್ದ. ಅವನನ್ನು ಸಾಕಿ ಬೆಳೆಸಿದ ದುಂಡವ್ವ ಆಯಿ ಬದುಕಿದ್ದಿದ್ದರೆ ಇಷ್ಟೊತ್ತಿಗೆ ಅವನಿಗೊಂದು ಹೆಣ್ಣು ನೋಡಿ ಮದುವೆ ಮಾಡಿರುತ್ತಿದ್ದಳೇನೋ! ಆದರೆ ಕರೋನಾ ಹಾವಳಿಯಲ್ಲಿ ತರಗಲೆಯಂತೆ ಉದುರಿದ ಜೀವಿಗಳ ಸಾಲಿನಲ್ಲಿ ಅವಳೂ ಒಬ್ಬಳಾಗಿದ್ದಳು. ಇದ್ದ ಒಂದು ಜೀವದ ಬಳ್ಳಿ ತುಂಡಾದ ಬಳಿಕ ಮಾದೇವ ಉಟ್ಟ ಬಟ್ಟೆಯ ಮೇಲೆಯೇ ಊರು ಬಿಟ್ಟು ಬಂದಿದ್ದ. ನಿದ್ರೆ ಬಂದಲ್ಲಿ ಮಲಗಿದ. ಹಸಿವಾದಾಗ ಕಂಡಕಂಡವರಿಗೆ ಕೈ ಚಾಚಿದ. ಕೆಲವೊಬ್ಬರು ಕೊಟ್ಟರು, ಕೆಲವೊಬ್ಬರು ಇವನ ಕುರುಚಲು ಗಡ್ಡ, ಉದ್ದ ತೋಳಿನ ಅಂಗಿ, ದೊಗಳೆ ಪ್ಯಾಂಟು ಕಂಡು ಹುಚ್ಚನೆಂದು, ಕಳ್ಳನೆಂದು, ಹತ್ತಿರಕ್ಕೂ ಬಿಟ್ಟುಕೊಳ್ಳದೆ ಬೈದು ಕಳಿಸಿದರು. ಹತ್ತಾರು ಊರುಗಳನ್ನು ತಿರುಗಿ, ಎಲ್ಲಿಯೂ ನೆಲೆ ಕಾಣದೆ ಸದ್ಯ ಬಾಗಲಕೋಟೆಯ ಎ.ಪಿ.ಎಂ.ಸಿ ಮುಂದಿರುವ ಈ ಪಾಳುಬಿದ್ದ ತಂಗುದಾಣದಲ್ಲಿದ್ದ.

ರಾತ್ರಿ ಉಪವಾಸ ಮಲಗಿದ್ದ. ಹೊಟ್ಟೆ ತಾಳ ಹಾಕುತ್ತಲಿತ್ತು. ತಿನ್ನಲು ಏನಾದರೂ ಸಿಗಬಹುದೆಂದು ಎರಡು ಮೂರು ಅಂಗಡಿಗಳ ಮುಂದೆ ಹೋಗಿ ನಿಂತು ಆಸೆಗಣ್ಣಿಂದ ನೋಡಿದ. ಯಾರೊಬ್ಬರೂ ಕ್ಯಾರೆ ಅನ್ನಲಿಲ್ಲ. ಮರಳಿ ತಂಗುದಾಣಕ್ಕೆ ಬಂದ. ಅಲ್ಲಿನ ಗಬ್ಬುನಾಥ ಉಸಿರುಗಟ್ಟಿಸುತ್ತಿತ್ತು. ಬೇವಿನ ಮರದ ಟೊಂಗೆ ಮುರಿದು ಅದನ್ನೇ ಕಸಬಾರಿಗೆ ಮಾಡಿ ಕಸ ಗುಡಿಸಿ, ಗಲೀಜನ್ನೆಲ್ಲ ಒಯ್ದು ಹೊರಗೆ ಚೆಲ್ಲಿದ. ಮನಸ್ಸಿಗೆ ನಿರಾಳವಾಯಿತು. ರಸ್ತೆಯ